ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY

ಯರಗೇರಾ-584133, ರಾಯಚೂರು, ಕರ್ನಾಟಕರಾಜ್ಯ, ಭಾರತ

ವಿದ್ಯಾರ್ಥಿ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ

ಸಂಖ್ಯೆ: ರಾವಿರಾ/ವಿ.ಕ./ಅ.ಮ.ವಿ.ಯು.ಉ/2022-23/ ದಿನಾಂಕ: 08.01.2023

**ಸುತ್ತೋಲೆ**

ವಿಷಯ: ರಾಯಚೂರು ವಿಶ್ವವಿದ್ಯಾಲಯದ ಅಂತರ್ ಕಾಲೇಜುಗಳ ಯುವಜನೋತ್ಸವ ಆಯೋಜಿಸುವ ಕುರಿತು

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 06.01.2023

**********

ಮಾನ್ಯ ಕುಲಪತಿಗಳ ನಿರ್ದೇಶನದಂತೆ ರಾಯಚೂರು ವಿಶ್ವವಿದ್ಯಾಲಯದ ಅಂತರ ಕಾಲೇಜುಗಳ ಯುವಜನೋತ್ಸವ ಸಾಂಸ್ಕೃತಿಕ ಸ್ಪರ್ಧೆಗಳನ್ನು 21 ಹಾಗೂ 22 ನೇ ಜನವರಿ,2023 ರಂದು ನಡೆಸಲು ನಿರ್ಧರಿಸಲಾಗಿದೆ. ಆದ್ದರಿಂದ ರಾಯಚೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳು ಈ ಸುತ್ತೋಲೆಯೊಂದಿಗೆ ಯುವಜನೋತ್ಸವದಲ್ಲಿ ನಡೆಸುವ ಸ್ಪರ್ಧೆಗಳನ್ನು ಹಾಗೂ ಸ್ಪರ್ಧೆಗಳ ವಿವರವಾದ ಮಾಹಿತಿಯನ್ನು ಲಗತ್ತಿಸಲಾಗಿದೆ. ಎಲ್ಲಾ ಪ್ರಾಂಶುಪಾಲರುಗಳು ತಮ್ಮ ಕಾಲೇಜುಗಳ ತಂಡಗಳನ್ನು ಈ ಕೆಳಗೆ ಕೊಡಲಾದ Annexure I, II, III ನಮೂನೆಯಲ್ಲಿ ತುಂಬಿ ವಿವರಗಳೊಂದಿಗೆ ವಿದ್ಯಾರ್ಥಿ ಕಲ್ಯಾಣಾಧಿಕಾರಿಗಳು, ರಾಯಚೂರು ವಿಶ್ವವಿದ್ಯಾಲಯ, ಯರಗೇರಾ, ರಾಯಚೂರು ಇವರಿಗೆ ದಿನಾಂಕ 16.01.2023 ರ ಒಳಗಾಗಿ ಖುದ್ದಾಗಿ ಅಥವಾ ಅಂಚೆ ಮುಖಾಂತರ ತಲುಪುವಂತೆ ಕಳುಹಿಸಬೇಕಾಗಿ ವಿನಂತಿ. ರಾಯಚೂರು ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆದಂತಹ ಪ್ರಥಮ ಹಾಗೂ ದ್ವಿತೀಯ ವರ್ಷದ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳನ್ನು ಮಾತ್ರ ಯುವಜನೋತ್ಸವದಲ್ಲಿ ಭಾಗವಹಿಸಲು ತಿಳಿಸಲಾಗಿದೆ.

ತಮ್ಮೆಲ್ಲರ ಪ್ರೋತ್ಸಾಹ ಹಾಗೂ ಸಹಕಾರ ನಮ್ಮೊಂದಿಗಿರಲಿ

ವಿದ್ಯಾರ್ಥಿ ಕಲ್ಯಾಣಾಧಿಕಾರಿಗಳು
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

ಗೆ,

ರಾಯಚೂರು ವಿಶ್ವವಿದ್ಯಾಲಯದ ಸಂಲಗ್ನತೆ ಹೊಂದಿರುವ ಎಲ್ಲಾ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ
ಹಾಗೂ ವಿಶ್ವವಿದ್ಯಾಲಯದ ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳಿಗೆ

ಪ್ರತಿಗಳು ಮಾಹಿತಿಗಾಗಿ,

1. ಕುಲಸಚಿವರು (ಮೌಲ್ಯಮಾಪನ) ರಾಯಚೂರು ವಿಶ್ವವಿದ್ಯಾಲಯ,ರಾಯಚೂರು ಇವರ ಮಾಹಿತಿಗಾಗಿ
2. ಹಣಕಾಸು ಅಧಿಕಾರಿಗಳು,ರಾಯಚೂರು ವಿಶ್ವವಿದ್ಯಾಲಯ,ರಾಯಚೂರು ಇವರ ಮಾಹಿತಿಗಾಗಿ
3. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕರು, ರಾಯಚೂರು ವಿಶ್ವವಿದ್ಯಾಲಯ.ರಾಯಚೂರು ಇವರ ಮಾಹಿತಿಗಾಗಿ.
4. ಕಚೇರಿ ಪ್ರತಿ